ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 793 ಗ್ರಾಪಂಅ 2015.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 05.02.2016

# ಸುತ್ತೋಲೆ

**ವಿಷಯ:** ಗ್ರಾಮ ಪಂಚಾಯತಿ ನಿಧಿಯಲ್ಲಿ ಶೇ.2 ಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಕ್ರೀಡಾ ಕಾರ್ಯಕ್ರಮಗಳಿಗೆ ಬಳಸಲು ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 292 ಜಿಪಸ 2002, ದಿನಾಂಕ 07.10.2002

***

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಯವರ ಪ್ರಸ್ತಾವನೆಯಂತೆ, ಗ್ರಾಮ ಪಂಚಾಯತಿಗಳು ಶಾಸನಬದ್ಧ ಅನುದಾನ, ಅಭಿವೃದ್ಧಿ ಅನುದಾನ ಹಾಗೂ ಸ್ವಂತ ಅನುದಾನದಲ್ಲಿ ಶೇ.2 ರಷ್ಟು ಅನುದಾನವನ್ನು ಕ್ರೀಡಾ ಚಟುವಟಿಕೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಹಾಗೂ ನಿರ್ವಹಣೆಯ ವೆಚ್ಚ ಭರಿಸಲು ಆಯವ್ಯಯದಲ್ಲಿ ನಿಗಧಿಪಡಿಸುವಂತೆ ಉಲ್ಲೇಖಿತ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಲಾಗಿದೆ. ಆದರೆ, ಸೂಕ್ತ ಮಾರ್ಗಸೂಚಿಗಳ ಕೊರತೆಯಿಂದ ಗ್ರಾಮ ಪಂಚಾಯತಿಗಳು ಶೇ.2 ರಷ್ಟು ಅನುದಾನವನ್ನು ಕ್ರೀಡಾ ಚಟುವಟಿಕೆಗಳಿಗೆ ಬಳಸಲು ವಿಫಲವಾಗುತ್ತಿವೆ.

ಗ್ರಾಮೀಣ ಭಾಗದಲ್ಲಿ ಕ್ರೀಡೆ, ಇನ್ನಿತರೆ ಯುವಜನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಯುವಜನರಿಗೆ ಉತ್ತೇಜನ ನೀಡಿ, ಉತ್ತಮ ಪ್ರತಿಭೆಗಳನ್ನು ಸಮಾಜಕ್ಕೆ ತೋರಿಸುವಲ್ಲಿ ಸಹಕಾರಿಯಾಗುವುದು ಸರ್ಕಾರದ ಆಶಯವಾಗಿರುತ್ತದೆ. ಆದುದರಿಂದ, ಗ್ರಾಮ ಪಂಚಾಯತಿಗಳು ಶಾಸನಬದ್ಧ ಅನುದಾನ, ಅಭಿವೃದ್ಧಿ ಅನುದಾನ ಹಾಗೂ ಗ್ರಾಮ ಪಂಚಾಯತಿಗೆ ಎಲ್ಲಾ ಮೂಲಗಳಿಂದ ಲಭ್ಯವಾಗುವ ಅನುದಾನಗಳಲ್ಲಿ ಶೇ.2 ರಷ್ಟು ಅನುದಾನವನ್ನು ಗ್ರಾಮ ಪಂಚಾಯತಿಗಳ ಆಯವ್ಯಯದಲ್ಲಿ ಮೀಸಲಿರಿಸಿ, ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಈ ಅನುದಾನವನ್ನು ವಿನಿಯೋಗಿಸುವಲ್ಲಿ ಗ್ರಾಮ ಪಂಚಾಯತಿಗಳು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಈ ಕೆಳಗಿನಂತೆ ನಿರ್ಧಿಷ್ಟಪಡಿಸಲಾಗಿದೆ.

- ಗ್ರಾಮ ಪಂಚಾಯತಿ ವ್ಯಾಪ್ತಿಯ ಸರ್ಕಾರಿ/ಅನುದಾನಿತ ಶಾಲೆಗಳಿಂದ/ಕಾಲೇಜುಗಳಿಂದ ಹೋಬಳಿ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ **ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸುವವರಿಗೆ** ಕ್ರೀಡಾ ಸಮವಸ್ತ್ರ, ಷೂ ಹಾಗೂ ಇನ್ನಿತರೆ ಕ್ರೀಡಾ ಪರಿಕರಗಳನ್ನು ಖರೀದಿಸಲು ಕ್ರಮವಾಗಿ ರೂ.3000, ರೂ.4000 ಮತ್ತು ರೂ.5000 ಗಳ ಸಹಾಯಧನವನ್ನು ನೀಡಬಹುದು.
- ಜಿಲ್ಲಾ ಕ್ರೀಡಾ ಇಲಾಖೆಯಿಂದ ಮಾನ್ಯತೆ/ಶಿಫಾರಸ್ಸು ಪಡೆದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ **ಗ್ರಾಮೀಣ ಯುವಕ ಸಂಘಗಳು ಏರ್ಪಡಿಸುವ** ಗ್ರಾಮ ಪಂಚಾಯತಿ ಮಟ್ಟ, ಹೋಬಳಿ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಕ್ರೀಡಾ ಸ್ಪರ್ಧೆಗಳನ್ನು ನಡೆಸಲು ಹಾಗೂ ಕ್ರೀಡಾ ಪರಿಕರಗಳನ್ನು ಖರೀದಿಸಲು ಕ್ರಮವಾಗಿ ರೂ.5000 ರಿಂದ ರೂ.10,000 ಗಳ ಪ್ರೋತ್ಸಾಹಧನವನ್ನು ಒಮ್ಮೆ ನೀಡಬಹುದು.

- ಜಿಲ್ಲಾ ಕ್ರೀಡಾ ಇಲಾಖೆಯಿಂದ ಮಾನ್ಯತೆ/ಶಿಫಾರಸ್ಸು ಪಡೆದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಗ್ರಾಮೀಣ ಯುವಕ ಸಂಘಗಳು, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ದೇಶೀ, ಸಾಂಪ್ರದಾಯಿಕ ಮತ್ತು ಜನಪದ ಕ್ರೀಡಾ ಕೂಟಗಳನ್ನು (ಕಂಬಳ, ಡೊಳ್ಳು ಕುಣಿತ, ಆಟ್ಯಾ-ಪಾಟ್ಯಾ, ಎತ್ತಿನ ಓಟ, ಎತ್ತಿನ ಬಂಡಿ ಓಟ, ಟಗರು ಕಾದಾಟ ಸ್ಪರ್ಧೆ, ಕುಸ್ತಿ ಸ್ಪರ್ಧೆ, ಕಬಡ್ಡಿ, ಕೆಸರು ಗದ್ದೆ ಓಟ, ನಶಿಸಿ ಹೋಗುತ್ತಿರುವ ಇತರೆ ದೇಶೀ, ಸಾಂಪ್ರದಾಯಿಕ ಗ್ರಾಮೀಣ ಕ್ರೀಡೆಗಳು) ಆಯೋಜಿಸಲು ಗರಿಷ್ಠ ರೂ.5000 ಗಳವರೆಗೆ ಕ್ರೀಡೆಗಳಿಗನುಗುಣವಾಗಿ ಒಮ್ಮೆ ಸಹಾಯಧನ ನೀಡಬಹುದು.
- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಏರ್ಪಡಿಸಿದ ಯುವಜನ ಕ್ರೀಡಾ ಮೇಳವನ್ನು, ಯುವಜನೋತ್ಸವವನ್ನು ತಾಲ್ಲೂಕು ಅಥವಾ ಜಿಲ್ಲಾ ಮಟ್ಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ದಿನಭತ್ಯೆ, ಪ್ರಯಾಣ ಭತ್ಯೆ ಹಾಗೂ ಕ್ರೀಡಾ ಸಲಕರಣೆಗಳನ್ನು ಸಾಗಿಸಲು ಸಾರಿಗೆ ವೆಚ್ಚಗಳಿಗಾಗಿ ಗರಿಷ್ಠ ರೂ.5000 ಗಳವರೆಗೆ ಸಹಾಯಧನ ನೀಡಬಹುದು.
- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮೀಣ ಜನತೆಗೆ ಯೋಗಾಸನದ ಬಗ್ಗೆ ಅರಿವು ಮೂಡಿಸಲು, ಜಿಲ್ಲಾ/ತಾಲ್ಲೂಕು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ/ಆಯುಷ್ ಇಲಾಖೆಯಿಂದ ಮಾನ್ಯತೆ/ಶಿಫಾರಸ್ಸು ಪಡೆದ ಅರ್ಹ ಸಂಸ್ಥೆಗಳಿಂದ ತರಬೇತಿ ಶಿಬಿರ ಅಥವಾ ಯೋಗ ಶಿಬಿರಗಳನ್ನು ಆಯೋಜಿಸಲು ಒಮ್ಮೆ ರೂ.3000 ವರೆಗೆ ಸಹಾಯಧನ ನೀಡಬಹುದು.
- ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮೀಣ ಯುವತಿಯರಿಗೆ ಕರಾಟೆ, ಕುಸ್ತಿ, ಕುಂಗ್ಫೂ, ಟೇಕ್ವಾಂಡೋ, ಇನ್ನಿತರೆ ರಕ್ಷಣಾ ತಂತ್ರಗಳ ಬಗ್ಗೆ ಅರಿವು ಮೂಡಿಸಲು ಗ್ರಾಮ ಪಂಚಾಯತಿ ಮಟ್ಟದಲ್ಲಿ ಜಿಲ್ಲಾ ಕ್ರೀಡಾ ಇಲಾಖೆಯಿಂದ ಮಾನ್ಯತೆ/ಶಿಫಾರಸ್ಸು ಪಡೆದ ಅರ್ಹ ಸಂಸ್ಥೆಗಳು ಕಾರ್ಯಾಗಾರ ಅಥವಾ ತರಬೇತಿಯನ್ನು ಆಯೋಜಿಸಿದಲ್ಲಿ, ಸದರಿ ಸಂಸ್ಥೆಗಳಿಗೆ ಒಮ್ಮೆ ರೂ.5000 ವರೆಗೆ ಸಹಾಯಧನ ನೀಡಬಹುದು.
- ಗ್ರಾಮೀಣ ಗರಡಿ ಮನೆಗಳ ನಿರ್ವಹಣೆಗೆ ಹಾಗೂ ಪರಿಕರಗಳಿಗಾಗಿ ವಾರ್ಷಿಕವಾಗಿ ಗರಿಷ್ಠ ರೂ.10,000 ಗಳನ್ನು ಮೀರದಂತೆ ಅನುದಾನ ಒದಗಿಸಬಹುದು.
- ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ನಿರ್ಮಿಸಲಾದ/ಅಭಿವೃದ್ಧಿಪಡಿಸಲಾದ ಆಟದ ಮೈದಾನಗಳಲ್ಲಿ ಅಗತ್ಯವಿರುವ ಸ್ಥಿರ ಕ್ರೀಡಾ ಸಲಕರಣೆಗಳನ್ನು ಒದಗಿಸಲು (ಖೋಖೋ ಪೋಲ್ಸ್, ವಾಲಿಬಾಲ್ ಪೋಲ್ಸ್, ಫುಟ್‌ಬಾಲ್ ಪೋಲ್ಸ್, ಇತ್ಯಾದಿ) ಗರಿಷ್ಠ ರೂ.20,000 ಗಳ ವೆಚ್ಚದಲ್ಲಿ ಭರಿಸಬಹುದು.

**ಅನುದಾನ ನಿಗಧಿಪಡಿಸುವಲ್ಲಿ ಅನುಸರಿಸಬೇಕಾದ ಕ್ರಮಗಳು:**

- ಗ್ರಾಮ ಪಂಚಾಯಿತಿ ಸ್ವಂತ ಆದಾಯದಲ್ಲಿ ಉಪಕರಗಳನ್ನು ಹೊರತುಪಡಿಸಿ ಶೇ.2 ಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಕ್ರೀಡಾ ಚಟುವಟಿಕೆಗಳಿಗೆ ಖರ್ಚು ಭರಿಸುವುದು.
- ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದಲ್ಲಿ ಸರ್ಕಾರಿ ಹಾಗೂ ಇತರೆ ಇಲಾಖೆಗಳ ಪರವಾಗಿ ಸಂಗ್ರಹಿಸಿ, ಸರ್ಕಾರಕ್ಕೆ ಮರುಪಾವತಿಸಬೇಕಾದ ತೆರಿಗೆಗಳನ್ನು ಹೊರತುಪಡಿಸಿ ಶೇ.2 ಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಕ್ರೀಡಾ ಚಟುವಟಿಕೆಗಳಿಗೆ ಖರ್ಚು ಭರಿಸುವುದು.
- ಆಯಾ ಆರ್ಥಿಕ ಸಾಲಿನ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿದ ಅನುದಾನವನ್ನು ಆಯಾ ಆರ್ಥಿಕ ಸಾಲಿನಲ್ಲೇ ಕಡ್ಡಾಯವಾಗಿ ಖರ್ಚು ಭರಿಸುವುದು.

ಮೇಲೆ ನೀಡಿರುವ ಮಾರ್ಗಸೂಚಿಗಳಲ್ಲದೆ, ಪ್ರಾದೇಶಿಕ ಭಿನ್ನತೆಯ ಕಾರಣದಿಂದ ಇನ್ಯಾವುದೇ ಗ್ರಾಮೀಣ ಕ್ರೀಡಾ ಕಾರ್ಯಕ್ರಮಗಳು ಮುಖ್ಯವೆನಿಸಿದಲ್ಲಿ, ಗ್ರಾಮ ಪಂಚಾಯಿತಿಗಳು ತಮ್ಮ ತಮ್ಮ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿ, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಪ್ರಸ್ತಾವನೆಯನ್ನು ಸಲ್ಲಿಸಿ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು ಅಗತ್ಯ ಕ್ರಮವಹಿಸುವುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ, ಅನುಮೋದನೆಗೆ ಕ್ರಮವಹಿಸಲು ತಿಳಿಸಿದೆ. ಮೇಲೆ ತಿಳಿಸಿರುವ ಕ್ರೀಡಾ ಚಟುವಟಿಕೆಗಳಲ್ಲದೆ ಇನ್ನಿತರೆ ಕ್ರೀಡಾ ಚಟುವಟಿಕೆಗಳು ಅಗತ್ಯವೆನಿಸಿದಲ್ಲಿ, ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದರೆ ಅವುಗಳನ್ನು ಸಹ ಪರಿಗಣಿಸಲು ಅಗತ್ಯ ಸುತ್ತೋಲೆಯನ್ನು ಹೊರಡಿಸಲಾಗುವುದು.

5/2/16

**(ಕೆ.ಯಾಲಕ್ಕಿಗೌಡ)**
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಯನ್ನು:**

1. ರಾಜ್ಯದ ಎಲ್ಲಾ ಜಿಲ್ಲಾಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು.
4. ಗಣಕ ಕೋಶ–ಇಲಾಖಾ ವೆಬ್‌ಸೈಟ್‌ಗೆ ಅಳವಡಿಸಲು.
5. ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲು.
6. ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ :**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–01